04 MAR 2024

# ಕರ್ನಾಟಕ ಸರ್ಕಾರ

ಸಂಖ್ಯೆ ಇಡಿ 10 ವಿವಿಧ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 06ನೇ ಮಹಡಿ,
ಬೆಂಗಳೂರು, ದಿನಾಂಕ: 27/02/2024

## ಸುತ್ತೋಲೆ

ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ / ಸರ್ಕಾರೇತರ ಸಂಸ್ಥೆಗಳ / ವಿಶ್ವವಿದ್ಯಾಲಯಗಳ ಮುಖ್ಯಸ್ಥರು / ಅಧಿಕಾರಿಗಳು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಹಾಗೂ ಇಲಾಖೆಯ ಮತ್ತು ಇತರೆ ಕಾರ್ಯಕ್ರಮಗಳಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಭಾಗವಹಿಸಿದ ಸಂಧರ್ಭದಲ್ಲಿ ಹಾರ /ತುರಾಯಿ / ಹೂಗುಚ್ಛ ಮತ್ತು ಇತರ ಉಡುಗೊರೆಗಳನ್ನು ನೀಡುತ್ತಿರುವುದರಿಂದ ಸದರಿ ವಸ್ತುಗಳು ಪರಿಸರಕ್ಕೆ ಹಾನಿ ಉಂಟುಮಾಡುವ ಪ್ಲಾಸ್ಟಿಕ್ ಮತ್ತು ಇನ್ನಿತರೆ ಪರಿಸರ ಮಾರಕ ವಸ್ತುಗಳನ್ನು ಒಳಗೊಂಡಿರುತ್ತವೆ. ಇದರಿಂದಾಗಿ ಪರಿಸರ ಮಾಲಿನ್ಯ ಉಂಟಾಗಲು ಕಾರಣವಾಗುತ್ತಿರುವುದರಿಂದ ಇನ್ನು ಮುಂದೆ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಹಾಗೂ ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಹಾರ ತುರಾಯಿ, ಹೂಗುಚ್ಛ ಇತ್ಯಾದಿ ಯಾವುದೇ ಪರಿಸರ ಮಾಲಿನ್ಯ ಉಂಟುಮಾಡುವಂತಹ ವಸ್ತುಗಳನ್ನು ತರಬಾರದೆಂದು / ನೀಡಬಾರದೆಂದು ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ.

(ಶಿಲ್ಪಾ.ಕೆ),
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯಗಳು-2 ಮತ್ತು ಸಾಮಾನ್ಯ-2).

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ಶೈವಿ/83/ಪರಿಚಲನಾ ಆದೇಶ/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:06.03.2024.

### ಪರಿಚಲನಾ ಆದೇಶ

ಮೇಲ್ಕಂಡ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 10 ವಿವಿಧ 2024 ಬೆಂಗಳೂರು ದಿನಾಂಕ:27.02.2024 ನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರುಗಳು. ಕಾಲೇಜು ಶಿಕ್ಷಣ ಇಲಾಖೆ. ಪ್ರಾದೇಶಿಕ ಕಛೇರಿ. ಬೆಂಗಳೂರು. ಮೈಸೂರು. ಶಿವಮೊಗ್ಗ. ಮಂಗಳೂರು. ಧಾರವಾಡ ಮತ್ತು ಕಲಬುರಗಿ – ತಮ್ಮ ವ್ಯಾಪ್ತಿಗೆ ಬರುವ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಮಾಹಿತಿಗಾಗಿ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು. ಮಾಹಿತಿ ವಿಭಾಗ. ಕೇಂದ್ರ ಕಛೇರಿ. ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1) ಸರ್ಕಾರದ ಅಧೀನ ಕಾರ್ಯದರ್ಶಿಗಳ ಆಪ್ತ ಶಾಖೆಗೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-560 001.
2) ಆಯುಕ್ತರ, ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಹೆಚ್ಚುವರಿ ನಿರ್ದೇಶಕರ, ಜಂಟಿ ನಿರ್ದೇಶಕರ, ಆಪ್ತ ಶಾಖೆಗೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. – ಅಧಿಕಾರಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.
3) ಕಛೇರಿ ಪ್ರತಿ